# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್.ಎಲ್. ಧರ್ಮೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 940

ಉತ್ತರ ದಿನಾಂಕ : 18.12.2018

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕು ವ್ಯಾಪ್ತಿಯಲ್ಲಿ ಸರ್ಕಾರ ಅನುಷ್ಠಾನಗೊಳಿಸಲಾಗುತ್ತಿರುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಾವುವು; ಅವುಗಳ ರೂಪುರೇಷೆಗಳೊಂದಿಗೆ ಪೂರ್ಣ ವಿವರಗಳನ್ನು ನೀಡುವುದು; | ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಯಾವುದೇ ಬಹುಗ್ರಾಮ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುವುದಿಲ್ಲ.<br><br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅನುಷ್ಠಾನಗೊಳ್ಳುತ್ತಿರುವ ಬಿರೂರು ಮತ್ತು ಕಡೂರು ಕುಡಿಯುವ ನೀರಿನ ಯೋಜನೆಯಡಿ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳ ಮಾರ್ಗಮಧ್ಯದ 34 ಗ್ರಾಮಗಳ ಪೈಕಿ ಕಡೂರು ತಾಲ್ಲೂಕಿನ 20 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ.<br><br>ಕಡೂರು ತಾಲ್ಲೂಕಿನ ಸಖರಾಯಪಟ್ಟಣ ಮತ್ತು 1 ಜನವಸತಿಯ ಕುಡಿಯುವ ನೀರಿನ ಯೋಜನೆಯ ಕಾರ್ಯಾಚರಣೆ ಹಾಗೂ ನಿರ್ವಹಣೆ (O&M) ಪ್ರಗತಿಯಲ್ಲಿದೆ. |
| ಆ) | ಕೆಲವು ಯೋಜನೆಗಳು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳು ವಿಫಲವಾಗಿವೆ; ವಿಫಲವಾಗಲು ಕಾರಣವೇನು; | ಕಡೂರು ತಾಲ್ಲೂಕಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ. ಯಾವ ಯೋಜನೆಯೂ ವಿಫಲವಾಗಿರುವ ಕುರಿತು ವರದಿಯಾಗಿರುವುದಿಲ್ಲ. |
| (ಇ) | ಪೂರ್ಣಗೊಂಡಿರುವ ಯೋಜನೆಗಳು ಯಾವುವು; (ಅವುಗಳ ಪೂರ್ಣ ವಿವರಗಳನ್ನು ನೀಡುವುದು) | ಸಖರಾಯಪಟ್ಟಣ ಹಾಗೂ 1 ಜನವಸತಿಯ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿರುತ್ತದೆ. ಪೂರ್ಣಗೊಂಡ ನಂತರ ಒಂದು ವರ್ಷದ ಅವಧಿಗೆ ಗುತ್ತಿಗೆದಾರರು ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಮಾಡಿರುತ್ತಾರೆ. ಸದರಿ ಕಾಮಗಾರಿಯ O&M ಅನ್ನು ಜುಲೈ 2018ರವರೆಗೆ ಗ್ರಾಮ ಪಂಚಾಯಿತಿರವರು ನಿರ್ವಹಿಸಿರುತ್ತಾರೆ. ಪ್ರಸ್ತುತ ದಿನಾಂಕ:19.7.2018 ರಿಂದ 36 ತಿಂಗಳವರೆಗಿನ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಿದ್ದು, ನಿರ್ವಹಿಸಲಾಗುತ್ತಿದೆ |

| | | |
|---|---|---|
| (ಈ) | ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು ಸರ್ಕಾರ ಕಾಲಮಿತಿಯೇನಾದರೂ ವಿಧಿಸಿದೆಯೇ; ಹಾಗಿದ್ದಲ್ಲಿ, (ಯೋಜನೆವಾರು ಕಾಲಮಿತಿಯ ವಿವರಗಳನ್ನು ನೀಡುವುದು) | ಕಡೂರು ಮತ್ತು ತರೀಕೆರೆ ತಾಲ್ಲೂಕುಗಳ ಮಾರ್ಗಮಧ್ಯದ 34 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಲು ದಿನಾಂಕ:24.01.2018 ರಿಂದ 11 ತಿಂಗಳು (ಮಳೆಗಾಲ ಸಹಿತ) ಕಾಲಾವಧಿ ನೀಡಲಾಗಿದೆ. |
| (ಉ) | ಯೋಜನೆವಾರು ನಿಗದಿಪಡಿಸಿದ ಅನುದಾನ, ಬಿಡುಗಡೆ ಮಾಡಲಾದ ಹಾಗೂ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನವೆಷ್ಟು? (ಪೂರ್ಣ ವಿವರಗಳನ್ನು ನೀಡುವುದು) | ಕಡೂರು ಮತ್ತು ತರೀಕೆರೆ ತಾಲ್ಲೂಕುಗಳ ಮಾರ್ಗಮಧ್ಯದಲ್ಲಿ ಬರುವ 34 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ನಿಗದಿ ಪಡಿಸಿದ ಅನುದಾನ ರೂ.1374.54ಲಕ್ಷ ಬಿಡುಗಡೆಯಾದ ಅನುದಾನ ರೂ.607.56ಲಕ್ಷ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ ರೂ.766.98ಲಕ್ಷ.<br><br>ಸಖರಾಯಪಟ್ಟಣ, ಮತ್ತು ಒಂದು ಜನವಸತಿಯ ಕುಡಿಯುವ ನೀರಿನ ಯೋಜನೆಯ ಪ್ರಸಕ್ತ ಸಾಲಿನ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗೆ ನಿಗದಿ ಪಡಿಸಿದ ಅನುದಾನ ರೂ.27.87ಲಕ್ಷ ಬಿಡುಗಡೆಯಾದ ಅನುದಾನ ರೂ.31.62ಲಕ್ಷ (ಆರಂಭ ಶಿಲ್ಕು ಸೇರಿ). |

ಸಂ:ಗ್ರಾಅಪ 102 ಗ್ರಾನೀಸ(3)18

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು